# ಕೆರೆಗಳ ಕಬಳಿಕೆ ತಪ್ಪಿಸಲು ಕ್ರಮ: ಸಚಿವ ಅನಂತ

ಶಿರಸಿ: ರಾಜ್ಯದಲ್ಲಿ 36,000 ಕೆರೆಗಳಿವೆ. ಬೆಂಗಳೂರು ಆರಂಭದಲ್ಲಿ 300ಕೆರೆಗಳಿದ್ದವು. ಆದರೆ ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಭೂ ಮಾಫಿಯಾದ ಕಾರಣದಿಂದ ಕೆರೆಗಳು ನಾಶವಾಗಿವೆ. ಇಂಥ ನೂರಾರು ಕೆರೆಗಳ ಕಬಳಿಕೆ ತಪ್ಪಿಸುವುದಕ್ಕೆ ಬೆಂಗಳೂರಿನ ಜನಪ್ರತಿನಿಧಿಯಾಗಿ ಪ್ರಯತ್ನಿಸಿದ್ದು, ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿ ಸಮ್ಮೇಳನದಲ್ಲಿ ತೆಗೆದುಕೊಳ್ಳುವ ಶಿಫಾರಸುಗಳ ವರದಿಯನ್ನು ತಮಗೆ ನೀಡಿದರೆ ಕೇಂದ್ರ ಜಲಸಂಪನ್ಮೂಲ, ಅರಣ್ಯ, ಪರಿಸರ ಸಚಿವರು ಹಾಗೂ ಪ್ರಧಾನಿ ಕಾರ್ಯಾಲಯದ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಕೇಂದ್ರ ರಾಸಾಯಿನಿಕ ಹಾಗೂ ರಸಗೊಬ್ಬರ ಸಚಿವ ಅನಂತಕುಮಾರ ಭರವಸೆ ನೀಡಿದರು.



ಭಾರತೀಯ ವಿಜ್ಞಾನ ಸಂಸ್ಥೆ, ಸ್ವರ್ಣವಲ್ಲೀ ಸಂಸ್ಥಾನ, ವೃಕ್ಷಲಕ್ಷ ಆಂದೋಲನ ಮತ್ತಿತರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಸೋಂದಾದಲ್ಲಿ ಗುರುವಾರ ಆರಂಭಗೊಂಡ 'ಪಶ್ಚಿಮಘಟ್ಟ ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆ-ನಿರ್ವಹಣೆ ಕುರಿತ ಕೆರೆ ಸಮ್ಮೇಳನ' ಉದ್ಘಾಟಿಸಿ ಮಾತನಾಡಿದರು.

ಪ್ರೊ.ಬಿ.ಎಂ.ಕುಮಾರಸ್ವಾಮಿ ಮಾತನಾಡಿ, ನದಿ ಜೋಡಣೆಯನ್ನು ಕೈಗೊಂಡರೆ ಅದೊಂದು ರಾಷ್ಟ್ರೀಯ ದುರಂತ. ಲಕ್ಷಾಂತರ ಕೋಟಿ ಖರ್ಚು, ಅರಣ್ಯ ನಾಶ, ಲಕ್ಷಾಂತರ ಜನ ನಿರಾಶ್ರಿತರಾಗುವ ಈ ರಕ್ಕಸ ಯೋಜನೆಯನ್ನು ಕೇಂದ್ರ ಸರ್ಕಾರ ಶಾಶ್ವತವಾಗಿ ಕೈ ಬಿಡಬೇಕು. ಅದರ ಬದಲು ವಿಕೇಂದ್ರಿಕೃತ ಪರಂಪರೆ, ಅಭಿವೃದ್ಧಿ ಮಾದರಿ ಯೋಜನೆ ರೂಪಿಸಬೇಕು. ಕೆರೆ ಕಟ್ಟುವ, ಜೋಡಿಸುವ, ನದಿಗಳ ನೀರನ್ನು ಕೆರೆಗೆ ತುಂಬಿಸುವಂತ ಯೋಜನೆ ಕೈಗೆತ್ತಿಕೊಳ್ಳಬೇಕು ಎಂದರು.

ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಮಾತನಾಡಿ, ಕೆರೆಗಳು ದೇವಸ್ಥಾನವಿದ್ದಂತೆ. ನೀರಿನ ಸಾನಿಧ್ಯವಿದ್ದಲ್ಲಿ ದೇವರ ಸಾನಿಧ್ಯವಿರುತ್ತದೆ ಎಂಬ ಭಾವನೆಯಿಂದಲೇ ಹಿರಿಯರು ದೇವಸ್ಥಾನದ ಎದುರು ಕೆರೆಗಳನ್ನು ನಿರ್ಮಿಸಿದ್ದರು. ದೇವಸ್ಥಾನ ಕಟ್ಟಿದಷ್ಟೇ ಪುಣ್ಯ ಕೆರೆ ಕಟ್ಟುವುದರಲ್ಲೂ ಇದೆ. ಹೊಸ ದೇವಸ್ಥಾನಗಳನ್ನು ಕಟ್ಟುವುದಕ್ಕಿಂತ ಹಳೆ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸದಂತೆ, ಹೊಸ ಕೆರೆಗಳ ನಿರ್ಮಾಣಕ್ಕಿಂತ ಹಳೆಯ, ಕಣ್ಮರೆಯಾಗುತ್ತಿರುವ ಕೆರೆಗಳ ಪುನರುಜ್ಜೀವನಗೊಳಿಸುವುದು ಅಗತ್ಯವಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಬಗ್ಗೆ ನಿರ್ಲಕ್ಷ್ಯ ಭಾವನೆ ತಾಳದೇ ಕೆರೆಗಳ ಪುನರುಜ್ಜೀವನಗೊಳಿಸುವತ್ತ ಲಕ್ಷ್ಯ ವಹಿಸಬೇಕು ಎಂದರು.

ಕೆರೆ ಸಂರಕ್ಷಣೆಯಲ್ಲಿ ವಿಶೇಷ ಕೊಡುಗೆ ನೀಡಿರುವ ಸಾಗರ ತಾಲೂಕಿನ ಜಿಗಳೆಮನೆ ಗ್ರಾಮ ಅರಣ್ಯ ಸಮಿತಿಯ ಸದಸ್ಯರನ್ನು ಸ್ವರ್ಣವಲ್ಲೀ ಶ್ರೀಗಳು ಸನ್ಮಾನಿಸಿದರು.

ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ, ವಾಗ್ದೇವಿ ವಿಲಾಸ ಸಂಸ್ಥೆ ಅಧ್ಯಕ್ಷ ಹರೀಶ, ವಿಜ್ಞಾನಿ ಡಾ.ಸುಭಾಷ್ ಚಂದ್ರನ್, ಪ್ರೊ.ಬಿ.ಎಂ. ಕುಮಾರಸ್ವಾಮಿ, ಆರ್.ಎಸ್.ನಾಯ್ಕ ಮಾತನಾಡಿದರು

ಮಠದ ಉಪಾಧ್ಯಕ್ಷ ವಿ.ಎನ್.ಹೆಗಡೆ ಬೊಮ್ಮನಳ್ಳಿ ಸ್ವಾಗತಿಸಿದರು. ವೃಕ್ಷಲಕ್ಷ ಆಂದೊಲನ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳು ವೇದಘೋಷ ಮಾಡಿದರು. ಅರ್ಚನಾ ಮತ್ತು ಸಂಗಡಿಗರು ಜಲ ಜಾಗೃತಿ ಗೀತೆ ಹಾಡಿದರು. ವಾಗ್ದೇವಿ ಶಿಕ್ಷಣ ಸಂಸ್ಥೆ ಮಕ್ಕಳಿಂದ ಕೆರೆಗಳ ರಕ್ಷಣೆ ಕುರಿತು ರೂಪಕ ನಡೆಯಿತು. ಅನಂತ ಭಟ್ಟ ಹುಳಗೊಳ ನಿರೂಪಿಸಿದರು. ಎಂ.ಸಿ.ಹೆಗಡೆ ವಂದಿಸಿದರು. ಇದಕ್ಕೂ ಮೊದಲು ಇಲ್ಲಿನ ಕೆರೆಗೆ ಪುಜೆ ಸಲ್ಲಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು.

## ಉದ್ದಿಮೆಗಳಲ್ಲಿ ಹಸಿರು ತಂತ್ರಜ್ಞಾನ

**ಮನುಷ್ಯ ತನ್ನ ಆರೋಗ್ಯ ಸಂರಕ್ಷಣೆ ಜೊತೆಗೆ, ಕೆರೆಗಳನ್ನು, ಪರಿಸರವನ್ನು ಉಳಿಸಿಕೊಳ್ಳುವುದಕ್ಕೆ ಹಸಿರು ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ಅತ್ಯಂತ ಹೆಚ್ಚು ಮಾಲಿನ್ಯ ಉಂಟುಮಾಡುವ ರಸಗೊಬ್ಬರ, ರಾಸಾಯಿನಿಕ, ಪೆಟ್ರೋಕೆಮಿಕಲ್, ಫಾರ್ಮಾಸಿಟಿಕಲ್ ನಂತಹ ಉದ್ದಿಮೆಗಳಲ್ಲಿ ಹಸಿರು ತಂತ್ರಜ್ಞಾನ ಅಳವಡಿಸಲು ಪ್ರಯತ್ನಿಸಲಾಗುವುದು.**

■ ಅನಂತಕುಮಾರ

ಕೇಂದ್ರ ರಾಸಾಯಿನಿಕ ಹಾಗೂ ರಸಗೊಬ್ಬರ ಸಚಿವ.